ಚುಟುಕು ಸುದ್ದಿ

ನಿರುದ್ಯೋಗ ನಿವಾರಣೆಗೆ ವಿಶ್ವ ಕರ್ಮ ಯೋಜನೆ ಸಹಕಾರಿ

ಉದಯಕಾಲ ನ್ಯೂಸ್

ಮಸ್ಕಿ: ನಿರುದ್ಯೋಗ ನಿವಾರಣೆಗೆ ಪಿಎಂ. ವಿಶ್ವಕರ್ಮ ಯೋಜನೆ ಸಹಕಾರಿಯಾಗಿದೆ ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಹೇಳಿದರು.

ಪಟ್ಟಣದ ಗಾಂಧಿ ನಗರದಲ್ಲಿ ವಿಶ್ವ ಕರ್ಮ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿದ ಅವರು ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕವಾಗಿ ಹಿಂದುಳಿದ ಸಮಾಜವನ್ನು ಸದೃಢಗೊಳಿಸಲು ಇಂತಹ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದರು.

ಪಿಎಂ ವಿಶ್ವಕರ್ಮ ಯೋಜನೆ ಅಡಿಯಲ್ಲಿ ಉದ್ಯೋಗ ಕೈಗೊಳ್ಳಲು 1 ಲಕ್ಷದವರೆಗೆ ಆರ್ಥಿಕ ನೆರವು ನೀಡುವ ಮೂಲಕ ಯುವ ಸಮಾಜದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮುಂದಾಗಿದೆ ಎಂದರು.

ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಸದಸ್ಯರಾದ ರವಿಕುಮಾರ ಪಾಟೀಲ್, ಚೇತನ್ ಪಾಟೀಲ್ ಶರಣಯ್ಯ ಸೊಪ್ಪಿಮಠ, ಸಾಯಿ ನಿರುಪಾದಿ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಜಯ ಕಿರಣ್ ಕಾಂಬ್ಳೇಕರ್, ರಾಘವೇಂದ್ರ ಕೊರೆಕಾರ್, ನಿರ್ಮಲಾ ಕೊರೆಕರ್, ಸಾಯಿ ಬಾಬಾ ಕೊರೆಕರ್ ಇತರರು ಇದ್ದರು.

ಮರುವಿನ ಕಾಯಿಲೆಗೆ ಭಯಪಡುವ ಅಗತ್ಯವಿಲ್ಲ: ಡಾ.ಕಿರಣ ಪಾಟೀಲ್

ಉದಯಕಾಲ ನ್ಯೂಸ್

ಬೀದರ: ಮರುವಿನ ಕಾಯಿಲೆ ಮುಖ್ಯ ಲಕ್ಷಣಗಳು ಕಂಡುಬಂದರೆ ಯಾರೂ ಭಯಪಡದೆ ಜಿಲ್ಲೆಯ ಬ್ರಿಮ್ಸ್ ಆಸ್ಪತ್ರೆಯಲ್ಲಿ ಬ್ರೈನ್ ಹೆಲ್ತ್ ಇನಿಶಿಯೇಟಿವ್ ಕೇಂದ್ರವನ್ನು ಆರಂಭಿಸಲಾಗಿದ್ದು, ನರರೋಗ ವೈದ್ಯ ಶಾರೀರಿಕ ಚಿಕಿತ್ಸಕ ನರ್ಸ, ಮನೋವೈದ್ಯ ಮತ್ತು ಕಾರ್ಯಕ್ರಮ ಸಂಯೋಜಕರು ಈ ಕೇಂದ್ರದಲ್ಲಿ ಲಭವಿರುದ್ದರಿಂದ ತಾವು ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಜಿಲ್ಲಾ ಕುಷ್ಠ ರೋಗ ನಿರ್ಮೂಲನಾ ಅಧಿಕಾರಿ ಡಾ.ಕಿರಣ ಪಾಟೀಲ್ ಹೇಳಿದರು.

ಅವರು ಶನಿವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ''2024-25 ರ ಘೋಷವಾಕ್ಯ ಮರುವಿನ ಕಾಯಿಲೆ ವಿಶ್ವ ಅಲ್ಜೈಮರ್ ರೋಗಗಳನ್ನು ನಿರ್ವಹಿಸಲು ಇದು ಸಕಾಲ'' ಎಂಬ ಘೋಷ ವಾಕ್ಯಯೊಂದಿಗೆ ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟಿವ್ ಬೀದರ ಹಾಗೂ ಮದರ ತೆರಿಸಾ ವೃದ್ಧಾಶ್ರಮ ರವರ ಸಂಯುಕ್ತಶ್ರಾಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಅಲ್ಜೈಮರ್ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ತೊಂದರೆ, ಜ್ಞಾಪಕ ಶಕ್ತಿಯ ನಷ್ಟ, ದೃಷ್ಟಿ ಮತ್ತು ಸ್ಥಳದ ಮಾಹಿತಿಯ ಸಮಸ್ಯೆ, ವರ್ತನೆ ಮತ್ತು ಮನಸ್ಥಿತಿಯಲ್ಲಿ ಬದಲಾವಣೆ ಭಾಷಾ ಸಮಸ್ಯೆ, ಮತ್ತು ಸ್ಥಳದ ಗೊಂದಲ, ದುರ್ಬಲ ಅಥವಾ ನಿರ್ಧಾರದಲ್ಲಿ ದೃಢತೆಯಿಲ್ಲದಿರುವುದಿಲ್ಲ, ವಸ್ತುಗಳನ್ನು ತಪ್ಪಾದ ಜಾಗದಲ್ಲಿಡುವುದು ಈ ಮರುವಿನ ಕಾಯಿಲೆಯ ಲಕ್ಷಣಗಳಾಗಿರುತ್ತದೆ. ಕಾರಣ ಸಾರ್ವಜನಿಕರು ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸಬೇಕು ದೈನಂದಿನ ವ್ಯಾಯಾಮ, ಸತತವಾಗಿ ಮಾನಸಿಕ ವ್ಯಾಯಾಮಗಳು ಸಮತೋಲಿತ ಆಹಾರ ಸೇವನೆ, ಯೋಗ ಮತ್ತು ಧ್ಯಾನ ಮಾಡುವುದು ಮುಖ್ಯವಾಗಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬೀದರ ಮದರ ತೆರಿಸಾ ವೃದ್ಧಾಶ್ರಮದ ರವಿ ಜೋಸಫ್, ಬೀದರ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೀರಶೆಟ್ಟಿ ಚೆನ್ನಶೆಟ್ಟಿ, ಸುದರ್ಶನ, ಕೃತಿ, ಮಲ್ಲಿಕಾರ್ಜುನ ಗುಡೆ, ರಾಕೇಶ ಸೇರಿದಂತೆ ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

ಉಚಿತ ಕಾನೂನು ನೆರವು ಮತ್ತು ಅರಿವು ಸೇವೆ ಪಡೆಯಿರಿ: ನ್ಯಾ. ಹೆಚ್.ಎ.ಸಾತ್ವಿಕ್

ಉದಯಕಾಲ ನ್ಯೂಸ್

ರಾಯಚೂರು: ಜಗತ್ತು ವೇಗವಾಗಿ ಬೆಳೆಯುತ್ತಿದೆ. ಸಮಾಜದ ಜೀವಾಳವಾದ ಕಾರ್ಮಿಕರಿಗೆ ವಿವಿಧ ಸೌಲಭ್ಯಕ್ಕಾಗಿ ಕಾನೂನಿನ ನೆರವು ಮತ್ತು ಅರಿವು ಅಗತ್ಯವಾಗಿದ್ದು, ಆಸಕ್ತರು ನ್ಯಾಯಾಲಕ್ಕೆ ಬಂದು ಉಚಿತ ಕಾನೂನು ಸೇವೆ ಪಡೆಯಬಹುದಾಗಿದೆ ಎಂದು ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್ ಅವರು ಹೇಳಿದರು.

ನಗರದ ಕೃಷಿ ವಿಶ್ವವಿದ್ಯಾಲಯ ರಜತ ಮಹೋತ್ಸವ ಸಭಾಂಗಣದಲ್ಲಿ ಶನಿವಾರದಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಾರ್ಮಿಕ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾರ್ಮಿಕ ಕಾಯ್ದೆಗಳು, ಯೋಜನೆಗಳು ಹಾಗೂ ಬಡತನ ನಿರ್ಮೂಲನೆ ಪರಿಣಾಮಕಾರಿ ಅನುಷ್ಠಾನದ ಕುರಿತು ಒಂದು ದಿನದ ಜಿಲ್ಲಾ ಮಟ್ಟದ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಮಾತನಾಡಿದರು.

ದೇಶದಲ್ಲಿ ಅನೇಕ ಕಾನೂನುಗಳಿದ್ದು, ಎಲ್ಲರಿಗೂ ಕಾನೂನು ಅರಿವು ಬೇಕಾಗಿದೆ. ಅದಕ್ಕಾಗಿ ನ್ಯಾಯಾಲದಲ್ಲಿ ಉಚಿತ ಕಾನೂನು ಸೇವೆಯನ್ನು ಒದಗಿಸಲಾಗಿದ್ದು, ನಿಮಗೆ ಯಾವ ಭಾಷೆಯಲ್ಲಿ ಕಾನೂನು ಅರಿವು ಬೇಕೋ ಆ ಭಾಷೆಯಲ್ಲಿ ಕಾನೂನು ಅರಿವು ನೀಡಲಾಗುತ್ತಿದೆ. ದೇಶದಲ್ಲಿ ಹತ್ತಾರು ಕಾನೂನುಗಳಿದ್ದು, ಅವುಗಳ ಉಪಯೋಗ ಪಡೆದುಕೊಳ್ಳಬೇಕೆಂದರು.

ಕಾರ್ಮಿಕರ ಏಳಿಗೆಗಾಗಿ ಅನೇಕ ಕಾಯ್ದೆಗಳು ಜಾರಿಗೆ ಬಂದಿದ್ದು, ಅವುಗಳನ್ನು ಪ್ರತಿಯೊಬ್ಬರೂ ಅವಶ್ಯಕವಾಗಿ ಸದ್ಬಪಯೋಗಪಡಿಸಿಕೊಳ್ಳಬೇಕು. ಕೆಳಮಟ್ಟದಿಂದ ಸುಪ್ರೀಂ ಕೋರ್ಟ್‌ವರೆಗೂ ಕಾರ್ಮಿಕರ ಏಳಿಗೆಗಾಗಿ ಕೋರ್ಟ್‌ಗಳು ಶ್ರಮಿಸಲಾಗುತ್ತಿವೆಂದು ಕೆಲವೊಂದು ಪ್ರಕರಣಗಳನ್ನು ಉದಾಹರಣೆಯಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ಕಾರ್ಮಿಕ ಅಧಿಕಾರಿಯಾದ ಆರತಿ ಅವರು ಮಾತನಾಡಿ, ಕಾರ್ಮಿಕರು ತಮಗಿರುವ ಸರಕಾರದ ಯೋಜನೆ ಹಾಗೂ ಕಾನೂನುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ವಿಶ್ವಕ್ಕೆ ಕಾರ್ಮಿಕರ ಕೊಡುಗೆ ಅಪಾರ. ದೇಶಕ್ಕೆ ಅನ್ನ ನೀಡುವವ ರೈತ. ಸಂಘಟಿತ,

ಅಸಂಘಟಿತ, ಕಾರ್ಖಾನೆ ಇತರೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರ ಸೇವೆ ಅನನ್ಯವಾಗಿದ್ದು.

ಅವರ ಬದುಕು ಉಜ್ವಲ ಗೊಳ್ಳಲು ಸರಕಾರ ಕಾರ್ಮಿಕ ಇಲಾಖೆ ಮೂಲಕ ಹಲವಾರು ಯೋಜನೆಗಳನ್ನು ಹಲವಾರು ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರಿಗಾಗಿ ಜಾರಿಗೆ ತಂದಿದ್ದು, ಅವುಗಳಿಗಾಗಿ ಮೀಸಲಿರುವ ಅನುದಾನವನ್ನು ಪಡೆದುಕೊಂಡು ಜೀವನದಲ್ಲಿ ಉನ್ನತಿ ಸಾಧಿಸಬೇಕೆಂದರು.

ಈ ವೇಳೆ ಕನಿಷ್ಠ ವೇತನ ಕಾಯ್ದೆ-1948ರ ಕಾಯ್ದೆ ಕುರಿತು ರಾಯಚೂರಿನ 1ನೇ ವೃತ್ತದ ಕಾರ್ಮಿಕ ನಿರೀಕ್ಷಕರಾದ ಮಹ್ಮದ್ ಉಮರ್ ಅಬ್ದುಲ್ ಘನಿ, ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1986,

ತಿದ್ದುಪಡಿ ಕಾಯ್ದೆ-2016 ಕುರಿ ತು ಜಿಲ್ಲಾ ಬಾಲ ಕಾರ್ಮಿಕ ಯೋಜನೆ ನಿರ್ದೇಶಕರಾದ ಮಂಜುನಾಥ ರೆಡ್ಡಿ, ಉಪಧನ ಪಾವತಿ ಕಾಯ್ದೆ-1972, ಹೆರಿಗೆ ಸೌಲಭ್ಯ ಕಾಯ್ದೆ-1961, ಕೈಗಾರಿಕಾ ವಿವಾದ ಕಾಯ್ದೆ-1948, 4 ಕಾರ್ಮಿಕ ಕೋಡ್‌ಗಳ ಕುರಿತು ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಆರತಿ, ನೌಕರರ ರಾಜ್ಯ ವಿಮಾ ಕಾಯ್ದೆ-1948, ಕಾರ್ಮಿಕರ

ಅಧಿನಿಯಮ ಕಾಯ್ದೆ-1996ರ ಕುರಿತು ವಿರಣ್ಣ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ನಿಷೇಧಿಸುವಿಕೆ ಹಾಗೂ ನಿವಾರಿಸುವಿಕೆ ಕುರಿತು ರಾಯಚೂರಿನ 2ನೇ ವೃತ್ತದ ಕಾರ್ಮಿಕ ನಿರೀಕ್ಷಕರಾದ ಪ್ರಿಯಾಂಕ, ವೇತನ ಪಾವತಿ ಕಾಯ್ದೆ-1936, ಅಂತರಾಜ್ಯ ವಲಸೆ ಕಾರ್ಮಿಕ ಕಾಯ್ದೆ-1970, ಗುತ್ತಿಗೆ ಕಾರ್ಮಿಕ ಕಾಯ್ದೆ- 1970 ಕುರಿತು ವಕೀಲರಾದ ಶ್ರೀದೇವಿ, ಪರಿಶಿಷ್ಟ ಜಾತಿಯವರಿಗೆ ಇರುವ ಉದ್ಯೋಗ ಹಾಗೂ ಯೋಜನೆಗಳ ಕುರಿತು ಡಾ.ಬಿ.ಆರ್.ಅಂಬೇ ಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪ ಕರಾದ ರವಿ, ಪರಿಶಿಷ್ಟ ಪಂಗಡದಯವರಿಗೆ ಇರುವ ಉದ್ಯೋಗ ಹಾಗೂ ಯೋಜನೆಗಳ ಕುರಿತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾ ಧಿಕಾರಿ ಶ್ರೀಶೈಲ,

ವಿಲಕಚೇತನರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ಅವಕಾಶ ಕುರಿತು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀದೇವಿ ಹಾಗೂ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ-1965ರ ಕುರಿತು ಕೆ.ಸುದರ್ಶನ್ ಅವರು ಉಪನ್ಯಾಸವನ್ನು ನೀಡಿದರು.

ಇದೇ ಸಂದರ್ಭದಲ್ಲಿ ಎಲ್.ಐ.ಸಿ ಶಾಖಾ ವ್ಯವಸ್ಥಾಪಕರು ಮಧುಸೂದನ್, ವಿವಿಧ ಖಾಸಗಿ ಸಂಸ್ಥೆಗಳ ಮಾಲೀಕರ ಪರವಾಗಿ ಎಸ್.ಎನ್. ಜೂಹಿ, ಕಾರ್ಮಿಕ ಮುಖಂಡರಾದ ಎಸ್. ಮಹಾದೇವಪ್ಪ, ಖಾಸಗಿ ವಾಹನ ಚಾಲಕರ ಸಂಘದ ಅಧ್ಯಕ್ಷರಾದ ಜಾಫರ್ ಸಾಧಿಕ್, ಟೈಲರ್ ಅಸೋಸಿಯೇಷನ್ ಅಧ್ಯಕ್ಷರಾದ ಫಿರೋಜ್ ಖಾನ್ ಕಾರ್ಮಿಕ ಇಲಾಖೆಯ ವಿವಿಧ ಅಧಿಕಾರಿಗಳು, ಸಿಬ್ಬಂದಿಗಳು ಸೇರಿದಂತೆ ಸಾರ್ವಜನಿಕರು ಇದ್ದರು.

ನಿವೃತ್ತಿ ಪಡೆದ ಮೇಲ್ವಿಚಾರಕಿ ಅಂತೋಣಿಮ್ಮ ಅವರಿಗೆ ಬೀಳ್ಕೊಡುಗೆ

ಉದಯಕಾಲ ನ್ಯೂಸ್

ಸಿರವಾರ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಮಲ್ಲಟ ಮೇಲ್ವಿಚಾರಕಿಯಾಗಿ 12 ವರ್ಷಗಳ ಕಾಲ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಅಂಗನವಾಡಿ ಮೇಲ್ವಿಚಾರಕಿ ಅಂತೋಣಿಮ್ಮ ಅವರನ್ನು ಇಂದು ಮಲ್ಲಟ ವೃತ್ತದ ಅಂಗನವಾಡಿ ಕಾರ್ಯಕರ್ತರಿಂದ ಕುರುಕುಂದ ಗ್ರಾಮದ ರೇಣುಕಾ ಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಗೌರವಿಸಿ ಸನ್ಮಾನ ಮಾಡಲಾಯಿತು. ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಮಲ್ಲಟ ವಲಯದ ಎಲ್ಲಾ ಅಂಗನ ವಾಡಿ ಕಾರ್ಯಕರ್ತೆ ಅಡುಗೆ ಸಹಾಯಕಿಯರ ಅಭಿನಂದಿಸಿದರು.

ಇದೇ ಕಾರ್ಯಕ್ರಮದಲ್ಲಿ ಪೋಷಣ ಅಭಿಯಾನವನ್ನು ಆಯೋಜಿಸಲಾಯಿತು ಅಪೌಷ್ಟಿಕತೆ ಮುಕ್ತ ಭಾರತವನ್ನು ಸಾಧಿಸುವ ದೃಷ್ಟಿಯಿಂದ ಅಂಗನವಾಡಿ ಸೇವೆಗಳ ಬಳಕೆಯನ್ನು ಸುಧಾರಿಸುವ ಮೂಲಕ ಮತ್ತು ಜಿಲ್ಲೆಗಳಲ್ಲಿ ಅತಿ ಹೆಚ್ಚು ಅಪೌಷ್ಟಿಕತೆ ಹೊಂದಿರುವ ಜಿಲ್ಲೆಗಳನ್ನು ಗುರ್ತಿಸಿ ಪೋಷಕಾಂಶಗಳನ್ನ ಹಾಗೂ ಗರ್ಭಿಣಿಯರು ತಾಯಿಯಂದಿರಿಗೆ ಮಕ್ಕಳಿಗೆ ಸಮಗ್ರ ಅಭಿವೃದ್ಧಿ ಪೋಷಕಾಂಶಗಳನ್ನು ನೀಡುವುದನ್ನು ತಿಳಿಸಲಾಯಿತು. ಮಕ್ಕಳ 6 ವರ್ಷ ವಯಸ್ಸಿನವರು, ಗರ್ಭಿಣಿಯರು, ಹಾಲುಣಿಸುವ ತಾಯಿಯಂದಿರು ,ಪೋಷಕಾಂಶದ ಸ್ಥಿತಿಯನ್ನು ನೇರವಾಗಿ ಪರೋಕ್ಷವಾಗಿ ಪರಿಣಾಮ ಬೀರುವ ಹಲವಾರು ಯೋಜನೆಗಳನ್ನ ಪೌಷ್ಟಿಕ ಅಂಶಗಳನ್ನು ಸೇವಿಸುವುದರಿಂದ ಅಪೌಷ್ಟಿಕತೆಯ ಸಾಮಾನ್ಯ ಗುರಿಯನ್ನು ಸಾಧಿಸಲು ಸಹಕಾರಿ ಯಾಗಲಿದೆ. ಜೊತೆಗೆ ಪೌಷ್ಟಿಕಾಂಶದ ಕೊರತೆ ,ರಕ್ತ ಹೀನತೆ ಕಡಿಮೆ ತೂಕದ ಶಿಶುಗಳ ಮಟ್ಟವನ್ನ ಕಡಿಮೆ ಮಾಡಲು ಶ್ರಮಿಸುತ್ತದೆ. ಎಂದು ಮೇಲ್ವಿಚಾರಕೀ ನಾಗಮ್ಮ ತಿಳಿಸಿದರು.

ಇದೇ ಸಂದರ್ಭದಲ್ಲಿ ಸಿರವಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಮೇಲ್ವಿಚಾರಕಿಯಾದ , ನಾಗಮ್ಮ, ನಿರ್ಮಲ, ನೀಲಮ್ಮ,ಲಕ್ಷ್ಮಿ , ಮಲ್ಲಟ ವಲಯದ 39 ಅಂಗನವಾಡಿ ಕಾರ್ಯಕರ್ತೆ ಯರಾದ ಸುನಿತಾ, ದೊಡ್ಡಮ್ಮ, ರತ್ನಮ್ಮ, ರೇಣು ಕಮ್ಮವಡವಟಿ, ರಾಜೇಶ್ವರಿ, ಶಾಂತಮ್ಮ, ಹನು ಮಂತಿ,ಹಾಗೂ ಅಂಗನವಾಡಿ ಸಹಾಯಕಿ ಗ್ರಾಮ ಪಂಚಾಯತ್ ಸದಸ್ಯರು, ಶಿವಮ್ಮ ,ಲಕ್ಷ್ಮಿ, ಸಂಗಯ್ಯ ಸ್ವಾಮಿ ಚಿಂಚರಕಿ, ಎಸ್.ಡಿ.ಎಂ. ಸಿ.ಅಧ್ಯಕ್ಷರು ಶೇಖರಗೌಡ ಮಾಲಿಪಾಟೀಲ್, ಗ್ರಾಮಸ್ಥರು ಇತರರು ಇದ್ದರು.

ಸಚಿವ ಆರ್. ಬಿ. ತಿಮ್ಮಾಪೂರ ಕಾರ್ಖಾನೆ ನಿರ್ಮಾಣ ಸ್ಥಳಕ್ಕೆ ತಹಶೀಲ್ದಾರ್ ಶಂಶಾಲಂ ಭೇಟಿ

ಸಕ್ಕರೆ ಕಾರ್ಖಾನೆಗಾಗಿ ಭೂಮಿ ಅಕ್ರಮ ಆಗಿಲ್ಲ..!!

ಉದಯಕಾಲ ನ್ಯೂಸ್

ಲಿಂಗಸುಗೂರು: ಸಮೀಪದ ಸುಣಕಲ್ ಗ್ರಾಮದ ಹೊರ ವಲಯದಲ್ಲಿ ನಿರ್ಮಾಣವಾಗುತ್ತಿರುವ ಸಚಿವ ಆರ್.ಬಿ .ತಿಮ್ಮಾಪುರ ಒಡೆತನದ ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಸ್ಥಳಕ್ಕೆ ತಹಶೀಲ್ದಾರ್ ಶಂಶಾಲಂ ಭೇಟಿ ನೀಡಿ ಪರಿಶೀಲನೆ ನಡೆಸಿ,ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕಾಗಿ ಯಾವುದೇ ರೀತಿಯ ಅಕ್ರಮ ಭೂ ಕಬಳಿಕೆಯಾಗಿಲ್ಲ ಎಂದು ಹೇಳಿದರು.

ಲಿಂಗಸಗೂರು ತಾಲೂಕಿನ ರೋಡಲಬಂಡಾ (ಯುಕೆಪಿ) ಗ್ರಾಮ ಪಂಚಾಯತ ವ್ಯಾಪ್ತಿಯ ಸುಣಕಲ್ ಸೀಮೆಯಲ್ಲಿ ಅಬಕಾರಿ ಸಚಿವ ಆರ್.ಬಿ .ತಿಮ್ಮಾಪುರ ಅವರು ತಮ್ಮ ಪ್ರಭಾವ ಬಳಸಿ ಆರ್.ಬಿ .ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕಾಗಿ ಸುಣಕಲ್ ಹಾಗೂ ಚಿಕ್ಕ ಉಪ್ಪೇರಿ ಗ್ರಾಮದಲ್ಲಿ 60 ಎಕರೆ ಪಟ್ಟಾ ಭೂಮಿ ಖರೀದಿಸಿ,ಇದರಲ್ಲಿ ಪರಭಾರೆ ನಿಷೇಧಿತ ಜಮೀನಿದ್ದು ನಿಯಮ ಬಾಹಿರ ವಹಿವಾಟು ನಡೆದು ಸರಕಾರಿ ಸಾಗುವಳಿ, ಕಂದಾಯ,ಹಾಗೂ ಅರಣ್ಯ ಇಲಾಖೆಯ ಭೂಮಿ ಅಕ್ರಮ ಕಬಳಿಕೆ ಮಾಡಿದ್ದಾರೆ ಎಂದು ರೈತ (ಎ.ಐ.ಕೆ.ಕೆ.ಎಸ್) ಸಂಘಟನೆಯ ದೂರು ಆಧರಿಸಿ ತಹಶಿಲ್ದಾರ ಸೈಯದ್ ಶಂಶಾಲಂ ಸ್ಥಳ ಪರಿಶೀಲನೆ ಮಾಡಿ, ಕಾರ್ಖಾನೆ ಭೂಮಿ ಸರ್ವೆ ಮಾಡಿದ್ದು, ಸಕ್ಕರೆ ಕಂಪನಿಯು ತಾವು ಖರೀದಿಸಿದ ಭೂಮಿಯಲ್ಲಿ ಕಾರ್ಖಾನೆ ಸ್ಥಾಪನೆ ಗೆ ಮುಂದಾಗಿದ್ದು,ರೈತರ ಹಾಗೂ ಕಂದಾಯ,ಅರಣ್ಯ ಇಲಾಖೆಯ ಯಾವುದೇ ಸರಕಾರಿ ಭೂಮಿ ಒತ್ತುವರಿಯಾಗಿಲ್ಲ ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ವಲಯ ಅರಣ್ಯಾಧಿಕಾರಿ ವಿದ್ಯಾಶ್ರೀ,ಕಂದಾಯ ನಿರೀಕ್ಷಕ ರಾಮಕೃಷ್ಣ,ಗ್ರಾಮ ಲೆಕ್ಕಾಧಿಕಾರಿ ಪುಷ್ಪಲತಾ ಇದ್ದರು.

ಇಂದಿನ ದಿನಮಾನಗಳಲ್ಲಿ ಕರಕುಶಲ ಕೌಶಲ್ಯಗಳು ಅತೀ ಮುಖ್ಯ: ಮೇಹಮೂದಾ ಬೇಗಂ

ಉದಯಕಾಲ ನ್ಯೂಸ್

ಮಾನ್ವಿ: ಪಟ್ಟಣದ ಲೊಯೋಲ ಸಮಾಜ ಸೇವಾ ಕೇಂದ್ರದಲ್ಲಿ 10 ದಿನಗಳ ಕಾಲ ಗ್ರಾಮೀಣಾ ಭಾಗದ ಮಹಿಳೆಯರಿಗೆ ಆಭರಣಗಳ ತಯಾರಿಕೆ ಕುರಿತು ತರಬೇತಿಗೆ ಸಸಿಗೆ ನೀರು ಹಾಕುವ ಮೂಲಕ ಚಾಲನೆ ನೀಡಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಮೇಹಮೂದಾ ಬೇಗಂ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಇತ್ತೀಚಿನ ದಿನಮಾನಗಳು ಅತ್ಯಂತ ಸ್ಪರ್ಧಾತ್ಮಕವಾಗಿ ರುವು ದರಿಂದ ನಾವು ಪರೀಕ್ಷೆಗಳನ್ನು ಬರೆದು ಸರ್ಕಾರಿ ಕೆಲಸ ಪಡೆಯುವುದು ತುಂಬಾ ಕಷ್ಟವಾಗಿದೆ ಹಾಗಾಗಿ ನಾವುಗಳು ನಮ್ಮದೇ ಆದ ಒಂದು ಚಿಕ್ಕ ಕರಕುಶಲ ಚಟುವಟಿಕೆಗಳನ್ನು ಕಲಿತುಕೊಂಡು ಆರ್ಥಿಕವಾಗಿ ಸಧೃಡರಾಗುವುದು ಲೇಸು ಎಂದರು.

ನಂತರ ಮಾತನಾಡಿದ ಎಸ್.ಬಿ.ಐ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ರಾಯಚೂರಿನ ನಿರ್ದೇಶಕರಾದ ವಿಜಯಕುಮಾರ ಬಡಿಗೇರ್ ಮಾತನಾಡಿ ಎಲ್ಲಾ ಮಹಿಳೆಯರು ನಿಮ್ಮ ಮನೆಯ ಚಟುವಟಿಕೆಗಳ ನಂತರ ಬಿಡುವಿನ ಸಮಯದಲ್ಲಿ, ಮಕ್ಕಳನ್ನು ಶಾಲೆಗೆ ಕಳುಹಿಸಿದ ನಂತರ ಅಥವಾ ಕೆಲಸಗಳು ಇಲ್ಲದೇ ಇರುವಾಗಿ ಸಂಸಾರಕ್ಕೆ ಚಿಕ್ಕ ಮಟ್ಟದಲ್ಲಿ ಆರ್ಥಿಕ ಸಹಾಯವಾಗುವ ಚಟುವಟಿ ಕೆಗಳನ್ನು ಮಾಡಿಕೊಂಡು ಜೀವನ ರೂಪಿಸಿಕೊಳ್ಳಿ ಎಂದು ಸಲಹೆ ನೀಡಿದರು. ಲೊಯೋಲ ಸಮಾಜ ಸೇವಾ ಕೇಂದ್ರ,, ಮಾನವಿ ಮತ್ತು ಎಸ್.ಬಿ.ಐ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ರಾಯಚೂರು ಇವರ ಆಶ್ರಯದಲ್ಲಿ 10 ದಿನಗಳ ತರಬೇತಿ ಕಾರ್ಯಕ್ರಮದ ಉದ್ಘಾಟನ ಕಾಯ ರ್ಕಕ್ರಮಕ್ಕೆ ಮೇಹಮೂದಾ ಬೇಗಂ, ವಿಜಯ ಕುಮಾರ ಬಡಿಗೇರ್, ಶೈಲಜಾ ಉಪನ್ಯಾ ಸಕಿ, ರೇಷ್ಮಾ ಆಭರಣ ತರಬೇತಿ ಶಿಕ್ಷಕಿ ಮತ್ತು ಸಂಸ್ಥೆ ಯ ಬ್ರ.ಸುಮನ್ ಹಾಗೂ 28 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಶಾರದಾ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ

ಉದಯಕಾಲ ನ್ಯೂಸ್

ಮಾನ್ವಿ: ಪಟ್ಟಣದ ಶಾರದಾ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಜರಗಿತು

ಕಾರ್ಯಕ್ರಮವನ್ನು ರಾಯಚೂರಿನ ಎಸ್. ಆರ್.ಕೆ. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ರಾಯಚೂರು ವಿಶ್ವವಿದ್ಯಾಲಯದ ಮಾಜಿ ಸಿಂಡಿಕೇಟ್ ಸದಸ್ಯರಾದ ಡಾ. ಅರುಣಕುಮಾರಿ ಟಿ.ರವರು ಉದ್ಘಾಟಿಸಿ ಮಾತನಾಡುತ್ತ ಸಮಾಜದ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರ ಮಹತ್ವವಾಗಿದ್ದು ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರನ್ನು ಉನ್ನತ ಸ್ಥಾನದಲ್ಲಿರಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಿಕ್ಷಕರ ಬಗ್ಗೆ ವಿದ್ಯಾರ್ಥಿಗಳಿಗೆ ಒಳ್ಳೆಯ ಭಾವನೆ ಇಲ್ಲದಿರುವುದು ಕಂಡು ಬರುತ್ತಿದ್ದು ದುರಂತದ ಸಂಗತಿಯಾಗಿದೆ. ಆದ್ದ ರಿಂದ ಪ್ರತಿಯಬ್ಬ ಶಿಕ್ಷಕರು ವಿದ್ಯಾರ್ಥಿಗಳಿಗೆ ಕೇವ ಲ ಜ್ಞಾನ ನೀಡುವ ಕಾರ್ಯಕ್ಕೆ ಸೀಮಿತವಾಗದೆ ಮಕ್ಕಳ ಭಾವನೆಗಳನ್ನು ಅರ್ಥಮಾಡಿಕೊಂಡು ಬೋಧಿಸುವ ಭಾವನಾತ್ಮಕ ಸಾಮಾರ್ಥ್ಯ ಶಿಕ್ಷಕನಲ್ಲಿ ಬೇಕಾಗುತ್ತದೆ. ಶಿಕ್ಷಕರು ಕೇವಲ ಬೋಧನೆ ಮಾಡಿದರೆ ಉಪಯೋಗವಿಲ್ಲ ಮಕ್ಕಳನ್ನು ಆದರ್ಶ ಜೀವನದೆಡೆಗೆ ಪ್ರೋತ್ಸಾಹಿಸುವ ಕೌಶಲ್ಯ ಶಿಕ್ಷಕನಲ್ಲಿದ್ದಾಗ ಮಕ್ಕಳಲ್ಲಿ ಅಪೇಕ್ಷಿತ ಬದಲಾವಣೆ ತರಲು ಸಾಧ್ಯವಾಗುತ್ತದೆ ಭವಿಷ್ಯತ್ತಿನಲ್ಲಿ ತಾವು ಅಂತಹ ಶಿಕ್ಷಕರಾಗಿ ಎಂದು ಪ್ರಶಿಕ್ಷಣಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಮುಖ್ಯಸ್ಥರಾದ ಬಿ. ಕಿಶೋರ್ ಕುಮಾರ್ ಅವರು ಮಾತನಾಡಿ ಸಂಸ್ಥೆ ಕಟ್ಟಿ ಬೆಳೆಸುವಲ್ಲಿ ನಮ್ಮ ಕುಟುಂಬದ ಪ್ರತಿಯೊಬ್ಬರ ಪರಿಶ್ರಮವಿದ್ದು ನಮ್ಮ ಅಣ್ಣನವರಾದ ದಿ. ಮಧುಸೂದನ ಗುಪ್ತಾಜೀಯವರ ಶ್ರಮಕ್ಕೆ ಪ್ರತಿಫಲವಾಗಿ ತಾವೆಲ್ಲರೂ ಉತ್ತಮ ಫಲಿತಾಂಶ ನೀಡಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು ಅವರು ಮಾತನಾಡಿ ಸಮಾಜದಲ್ಲಿ ಎಲ್ಲಾ ವೃತ್ತಿಗಳು ಶ್ರೇಷ್ಠವಾಗಿದ್ದು ಅದರಲ್ಲಿ ಶಿಕ್ಷಕ ವೃತ್ತಿ ಅತಿ ಶ್ರೇಷ್ಠವಾದುದಾಗಿದೆ. ಆದ್ದರಿಂದ ಶಿಕ್ಷಕರಾದವರು ಸ್ವತಃ ಮೇಣದ ಬತ್ತಿಯಂತಿರಬೇಕಾಗುತ್ತದೆ. ಸಮಾಜಕ್ಕೆ ಆದರ್ಶವಾದ ಶಿಕ್ಷಕರು ಸ್ವತಃ ತಮ್ಮಲ್ಲಿ ಆದರ್ಶ ಮೈಗೂಡಿ ಸಿಕೊಂಡಿರಬೇಕು ಅಂದಾಗ ಮಾತ್ರ ಸಮಾಜದ ಬದಲಾವಣೆ ಸಾಧ್ಯವಾಗುತ್ತದೆ ಆದ್ದರಿಂದ ಭವಿಷ್ಯತಿ ನಲ್ಲಿ ಅಂತಹ ಶಿಕ್ಷಕ ರು ನೀವಾಗಬೇಕೆಂದು ಪ್ರಶಿಕ್ಷಣಾರ್ಥಿಗಳಿಗೆ ಕರೆ ಕೊಟ್ಟರು. ಉಪನ್ಯಾಸಕರಾದ ಈರಣ್ಣ ಮರ್ಲಟ್ಟಿ, ಪ್ರಶಿಕ್ಷಣಾರ್ಥಿಗಳಾದ ರಮೇಶ್ ನಾಯ ಕ್, ಭಾಗ್ಯಶ್ರೀ ಮತ್ತು ಕರಿಸಿದ್ದಪ್ಪ ಶಿಕ್ಷಕರ ದಿನಾಚರಣೆ ಕುರಿತು ಮಾತ ನಾಡಿದರು. ಸಂಸ್ಥೆಯ ಮುಖ್ಯಸ್ಥರಾದ ಬಿ. ಉಮಾಮಹೇಶ್ವರಿ ಮಧುಸೂದನ ಗುಪ್ತಾಜೀ, ಬಿ. ಮಂಜುಳಾ ಕಿಶೋರ ಕುಮಾರ್ ಅವರು ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ವೀರಭದ್ರಯ್ಯ ಹಿರೇಮಠ, ಸಿದ್ದಮಲ್ಲಯ್ಯ ಹಿರೇಮಠ, ಹನುಮಂತ ಗೌಡ, ಆನಂದ ಪಿ, ಇಮ್ತಿಯಾಜ್ ಪಾಷ, ರವಿರಾಜ್ ಡಿ, ಮಹಾಂತ ಗೌಡ, ನಿಂಗಪ್ಪ ಕಣ್ಣೂರ್ ಮತ್ತು ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಹಾಜರಿ ದ್ದರು.

ಕಾರ್ಯಕ್ರಮವನ್ನು ಶ್ರೀದೇವಿ ಮತ್ತು ಶ್ವೇತ ಪ್ರಾರ್ಥಿಸಿದರೆ, ಆರಿಫ್ ಸ್ವಾಗತಿಸಿದರೆ, ತೇಜಸ್ವಿನಿ ಹೊಸೂರು ಮತ್ತು ಭಾಗ್ಯಶ್ರೀ ನಿರೂಪಿಸಿದರೆ ಕೊನೆಯಲ್ಲಿ ನಾಗರಾಜ ವಂದಿಸಿದರು.

ಬಿಜೆಪಿ ಸದಸ್ಯತ್ವ ಅಭಿಯಾನದ ವೇಗಕ್ಕೆ 10 ಜಿಲ್ಲೆಗಳ ಉಸ್ತುವಾರಿ

ಉದಯಕಾಲ ನ್ಯೂಸ್

ಬೀದರ್: ಬಿಜೆಪಿ ಸದಸ್ಯತ್ವ ಅಭಿಯಾನವನ್ನು ಇನ್ನು ವೇಗವಾಗಿ ನಡೆಸಿಕೊಂಡು ಹೋಗುವ ಉದ್ದೇಶದಿಂದ ನನಗೆ ಕೇಂದ್ರ ಮತ್ತು ರಾಜ್ಯದ ವರಿಷ್ಠರು ಹಳೆ ಮೈಸೂರು ಭಾಗದ ಮೈಸೂರು ನಗರ, ಗ್ರಾಮಾಂತರ, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು, ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಒಟ್ಟು 10 ಜಿಲ್ಲೆಗಳ ಉಸ್ತುವಾರಿ ಜವಬ್ದಾರಿಯನ್ನು ನೀಡಿದ್ದಾರೆ ಕೇಂದ್ರ, ಮಾಜಿ ಸಚಿವ ಭಗವಂತ ಖುಬಾ ತಿಳಿಸಿದ್ದಾರೆ.

ಕಳೆದ 30 ವರ್ಷಗಳಿಂದ ಕಾರ್ಯಕರ್ತನಾಗಿ, ಸಂಸದನಾಗಿ, ಕೇಂದ್ರ ಸಚಿವನಾಗಿ ಪಕ್ಷವು ನನಗೆ ನೀಡಿರುವ ಪ್ರತಿಯೊಂದು ಜವಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿರುವೆ, ಇವಾಗ ನೀಡಿರುವ ಈ ಹೊಸ ಜವಬ್ದಾರಿಯೂ ನಿಷ್ಠೆಯಿಂದ ನಿಭಾಯಿಸಿ, ಸದಸ್ಯ ಅಭಿಯಾನವು ಯಶಸ್ವಿಯಾಗುವಲ್ಲಿ ನನ್ನ ಅವಿರತ ಶ್ರಮ ಹಾಕುವೆ ಎಂದು ಭಗವಂತ ಖೂಬಾ ತಿಳಿಸಿದ್ದಾರೆ.

ಸದಸ್ಯತ್ವ ಅಭಿಯಾನದ ಭಾಗವಾಗಿ ಈ ಹತ್ತು ಜಿಲ್ಲೆಗಳ ಜವಬ್ದಾರಿಯನ್ನು ನೀಡಿರುವ ಕೇಂದ್ರದ ವರಿಷ್ಠರಿಗೆ ಮತ್ತು ರಾಜ್ಯದ ವರಿಷ್ಠರಿಗೆ ಭಗವಂತ ಖೂಬಾ ಅವರು ಧನ್ಯವಾದಗಳು ತಿಳಿಸಿದ್ದಾರೆ.

IN THE COURT OF THE HON'BLE Prl., CIVIL JUDGE AND J.M.F.C. AT LINGSUGUR

Cri.Misc. No.2428/2024

PETITIONER

1. Siddmma w/o Nagappa, Age: 63 years, Occ: Agri.,
2. Gundappa S/o Amarappa. Age: 61 years, Occ: Agri.,
3. Yallappa S/o Amarappa, Age: 60 years, Occ: Agri.,
4. Basavaraj S/o Amarappa, Age: 48 years, Occ: Agri., All are residents of Gudadanal village, Tq: Lingsugur, Dist: Raichur.

// Versus//

RESPONDENT:

1) The Chief Officer, Death's and Birth's TMC Lingasugur Tq : Lingasugur Dist Raichur.

SUBJ:

Order for issuing of Death Certificate of Adamma w/o Amarappa R/o. Gudadanal village, Tq: Lingsugur, Dist: Raichur

To,

Whomsoever it may concern

Whereas, the above named claimants made application Under U/Sec. 13(3) of Birth and Death Registration Act for getting of death certificate of the deceased of Adamma w/o Amarappa R/o. Lingsugur, Tq: Lingsugur, Dist: Raichur who died on 08/01/2021 leaving petitioners as her legal heir.

Your are hereby directed to appear in this court, in person or by a pleader duly instructed on the 23 day of October 2024 at 11.00A.M. in the for-noon to show cause against the application, failing wherein the said application will be heard and determined as Ex-parte.

Given under my hand and the seal of the court is the 18th day of September-2024.

//By order of the court//

Through Shashidhar Hosamani Advocate Lingasugur.	sd/- Chief Ministerial Officers, Prl., Civil Judge and J.M.F.C. Lingasugur

ದಲಿತರ ಮೇಲೆ ದೌರ್ಜನ್ಯ: ಡಿಎಸ್‌ಎಸ್ ಖಂಡನೆ

ಉದಯಕಾಲ ನ್ಯೂಸ್

ವಾಡಿ: ರಾಜ್ಯದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ಹಲ್ಲೆ ಪ್ರಕರಣಗಳನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಬಣ) ಅತಿ ಉಗ್ರವಾಗಿ ಖಂಡಿಸುತ್ತದೆ ಎಂದು ಕದಸಂಸ ಜಿಲ್ಲಾ ಸಂಚಾಲಕ ಸತೀಶ ಬಟ್ಟರ್ಕಿ ತಿಳಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ಅವರು ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವ ದಲಿತ ಸಮುದಾಯವನ್ನು ತುಚ್ಚವಾಗಿ ಕಾಣುವ ನೀಚ ಮನಸ್ಥಿತಿ ಜನರು ಇಂದಿಗೂ ಜೀವಂತವಾಗಿರುವುದು ಪ್ರಜಾತಂತ್ರ ವ್ಯವಸ್ಥೆಯ ದುರಂತವಾಗಿದೆ ಎಂದಿದ್ದಾರೆ. ಪ್ರತಿದಿನ ರಾಜ್ಯದ ಒಂದಲ್ಲ ಒಂದು ಭಾಗಗಳಲ್ಲಿ ದಲಿತರ ಮೇಲೆ ಹಲ್ಲೆ, ಕೊಲೆ, ಅವಮಾನ, ಜಾತಿ ನಿಂದನೆ ಸೇರಿದಂತೆ ದಲಿತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ಘಟಿಸುತ್ತಿವೆ. ಈ ಕುರಿತು ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ಆದರೆ ತಪಿತಸ್ಥರ ವಿರುದ್ಧ ನಿರ್ದಿಷ್ಟವಾದ ಕಾನೂನು ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಆರೋಪಿಸಿದ್ದಾರೆ. ದಲಿತರಿಗೆ ಸಂಬಂಧಿಸಿದ ದೂರುಗಳನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಳಿಸಬೇಕು. ಆರೋಪಿಗಳನ್ನು ರಕ್ಷಿಸದೆ ಉಗ್ರವಾಗಿ ಶಿಕ್ಷಿಸಬೇಕು ಎಂದು ಆಗ್ರಹಿಸಿದ್ದಾರೆ.

ಜಿಲ್ಲಾ ಸಂ. ಸಂಚಾಲಕರಾದ ಸಾಯಬಣ್ಣ ಬಡಿಗೇರ, ಸಚಿನ ಎಂ ದೋಡ್ಡಮನಿ, ಇಂದುರಾಜ ಗುಡುಸಲಕರ್, ಜಿಲ್ಲಾ ಖಜಾಂಚಿ ಬಾಬು ಸಿಂಗೆ ರಾಜಶೇಖರ ನಾಡೀಕರ.ಶಿವಪುತ್ರ ಆರೆ ಇದ್ದರು.

ICICI Home Finance

ಕಾರ್ಪೊರೇಟ್ ಕಚೇರಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ ಅಂಧೇರಿ (ಪೂರ್ವ), ಮುಂಬಯಿ-400059, ಭಾರತ.

ಶಾಖಾ ಕಚೇರಿ : 1ನೇ ಮಹಡಿ, [illegible] ಸವಿತ ವಾಣಿಜ್ಯ ಸಂಕೀರ್ಣ, ಐಡಿಯಾ ಶೋರೂಮ್ ಮೇಲ್ಭಾಗ, 2/907/23/2, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲ್ಬರ್ಗ-585105

[ಪ್ರೊವಿಸೊ ನಿಯಮ 8(6) ನ್ನು ನೋಡಿ] ಸ್ಥಿರ ಆಸ್ತಿಗಳ ಮಾರಾಟ ಸೂಚನೆ

[illegible]

ದಿನಾಂಕ : ಸೆಪ್ಟೆಂಬರ್ 22,2024, ಸ್ಥಳ: ಕಲ್ಬುರ್ಗಿ

UK ಉದಯಕಾಲ

Since 1997

ಅನಿಕೇತನ ಪಬ್ಲಿಕೇಷನ್ ಅಂಡ್ ಪ್ರಿಂಟರ್ಸ್

730/A-1, 'ವೃದ್ಧಿ' 2ನೇ ಮಹಡಿ, ನಾಗರಭಾವಿ

2ನೇ ಹಂತ,11ನೇ ಬ್ಲಾಕ್, ಬೆಂಗಳೂರು- 560072.

080 - 29558575

ಜಾಹೀರಾತಿಗಾಗಿ ಸಂಪರ್ಕಿಸಿ

ಪುಟ್ಟಪ್ಪ ಬಿ.ಬಾಣದ: 98867 74482

ಆರ್. ಪಶುಪತಿ: 96113 35416

ಕಛೇರಿ: 08029558575

ಪತ್ರಿಕೆ ಬರುತ್ತಿಲ್ಲವೇ ? ಆತ್ಮೀಯ ಓದುಗರೇ, ಉದಯಕಾಲ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ

ಬೆಂಗಳೂರು: 7676633839

ಮೈಸೂರು: 91645 54488

ಬೆಳಗಾವಿ/ಹುಬ್ಬಳ್ಳಿ: 73493 10075

ಕಲಬುರಗಿ: 99004 21224

ಶಿವಮೊಗ್ಗ : 87223 32811/73493 10075